ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ
ಮುಖ್ಯ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ಚಿಕ್ಕಮಗಳೂರು.

ದಿನಾಂಕಃ 22.04.2026

ಸಿ.ಸಿ.ನಂ.1092/2025

ಪಿರ್ಯಾದುದಾರರು: ರಾಜ್ಯದ ಪರವಾಗಿ ನಗರ ಪೋಲೀಸರು,
ಚಿಕ್ಕಮಗಳೂರು.

ವಿರುದ್ಧ

ಆರೋಪಿ: ಯೇಸು ಬಿನ್ ಜಾನ್,
ವಯಸ್ಸು ಸುಮಾರು 43 ವರ್ಷ,
ವಾಸಃ ಮಾವಿನಹಳ್ಳಿ, ಅರಿಶಿನಗುಪ್ಪೆ
ಗ್ರಾಮ, ಮಲ್ಲೇನಹಳ್ಳಿ ಅಂಚೆ,
ಚಿಕ್ಕಮಗಳೂರು.

ದಂಡ ಪ್ರಕ್ರಿಯ ಸಂಹಿತೆ ಕಲಂಃ 351 ರ ಅಡಿಯಲ್ಲಿ ಆರೋಪಿ ಹೇಳಿಕೆ

1. ಅಭಿಯೋಜನೆಯವರ ಪರ ಸಾಕ್ಷಿ ವಿಚಾರಣೆಯನ್ನು ಕೇಳಿರುವಿಯಾ?

   ಉತ್ತರ :

2. ಫ್ರಾಸಾ-1 – ಅಬ್ದುಲ್ ಖಾದರ್ - ಪಿ.ಎಸ್.ಐ., ಇವರು ತಮ್ಮ ನುಡಿ ಸಾಕ್ಷ್ಯದಲ್ಲಿ ದಿನಾಂಕಃ 23.04.2025 ರಂದು ಸಂಜೆಃ 06.45 ಗಂಟೆಗೆ ತಾನು ಠಾಣೆಯಲ್ಲಿದ್ದಾಗ ಚಿಕ್ಕಮಗಳೂರು ತಾಲ್ಲೂಕು, ಅರಿಶಿಣಗುಪ್ಪೆ ಗ್ರಾಮದ ಮಾವಿನಹಳ್ಳಿಯ ಆರೋಪಿಯಾದ ನಿಮ್ಮ ಅಂಗಡಿಯ ಮುಂಭಾಗದ ಸಾರ್ವಜನಿಕ ರಸ್ತೆಯ ಬದಿಯಲ್ಲಿ ಅಕ್ರಮವಾಗಿ ಮದ್ಯವನ್ನು ಇಟ್ಟುಕೊಂಡು ಹೆಚ್ಚಿನ ಬೆಲೆಗೆ ಸಾರ್ವಜನಿಕರಿಗೆ ಮಾರಾಟ ಮಾಡುತ್ತಿರುವುದಾಗಿ ಬಂದ ಖಚಿತ ವರ್ತಮಾನದ ಮೇರೆಗೆ ಮೇಲಾಧಿಕಾರಿಗಳಿಗೆ ವಿಚಾರವನ್ನು ತಿಳಿಸಿ ಸ್ವಪಿರ್ಯಾದನ್ನು ತಯಾರಿಸಿ ಠಾಣಾ ಮೊಕದ್ದಮೆ ಸಂಖ್ಯೆಃ 40/2025 ರಂತೆ ಪ್ರಥಮ ವರ್ತಮಾನ ವರದಿಯನ್ನು ತಯಾರಿಸಿ ನ್ಯಾಯಾಲಯಕ್ಕೆ ಕಳುಹಿಸಿಕೊಟ್ಟಿದ್ದಾಗಿ ಸಾಕ್ಷಿ ನುಡಿದಿರುತ್ತಾರೆ. ಈ ಬಗ್ಗೆ ನೀವು ಏನು ಹೇಳುವಿರಿ?

   ಉತ್ತರ :

3. ಫ್ರಾಸಾ-1 ರವರು ತಮ್ಮ ಮುಂದುವರೆದ ನುಡಿ ಸಾಕ್ಷ್ಯದಲ್ಲಿ ನಂತರ ದಾಳಿಗಾಗಿ ಠಾಣಾ ಸಿಬ್ಬಂದಿಗಳಾದ ಎ.ಎಸ್.ಐ ಜಗದೀಶ್ ನಾಯಕ್, ಪಿ.ಸಿ ರಮೇಶ್, ಪಿ.ಸಿ ಮಹೇಂದ್ರರವರ ಜೊತೆಗೆ ಸಂಜೆಃ 07.00 ಗಂಟೆಗೆ ತನಿಖಾ ಪರಿಕರದೊಂದಿಗೆ ಹೊರಟು ಸಂಜೆಃ08.00 ಗಂಟೆಗೆ ಅರಿಶಿಣಗುಪ್ಪೆ ಗ್ರಾಮದ ಮಾವಿನಹಳ್ಳ ಬಸ್ ನಿಲ್ದಾಣಕ್ಕೆ ತಲುಪಿದ್ದಾಗಿ, ನಂತರ ಬಸ್ ನಿಲ್ದಾಣದ ಬಳಿ ಇದ್ದ ಇಬ್ಬರು ಪಂಚರನ್ನು ಕರೆದು ಪರಿಚಯ ಮಾಡಿಕೊಂಡು ಅವರು ಒಪ್ಪಿಕೊಂಡ ಮೇರೆಗೆ ಅವರನ್ನು ಪಂಚಸಾಕ್ಷಿಗಳಾಗಿ ನೇಮಕ ಮಾಡಿಕೊಂಡು ಅವರೊಂದಿಗೆ ಆರೋಪಿಯಾದ ನಿಮ್ಮ ಅಂಗಡಿಯ ಮುಂಭಾಗ ಹೋಗಿದ್ದಾಗಿ, ಅಲ್ಲಿ ಒಬ್ಬ ವ್ಯಕ್ತಿ ಕೇಸರಿ ಬಣ್ಣದ ಪ್ಲಾಸ್ಟೀಕ್ ಚೀಲದಲ್ಲಿ ಮಧ್ಯವನ್ನು ಇಟ್ಟುಕೊಂಡು ಸಾರ್ವಜನಿಕರಿಗೆ ಮಾರಾಟ ಮಾಡುತ್ತಿರುವುದನ್ನು ಖಚಿತಪಡಿಸಿಕೊಂಡು ಸಿಬ್ಬಂದಿಗಳ ಸಹಾಯದಿಂದ ಸದರಿ ವ್ಯಕ್ತಿಯನ್ನು ಹಿಡಿದು ಆತನ ಹೆಸರು ಮತ್ತು ವಿಳಾಸವನ್ನು ವಿಚಾರಿಸಿ ತಿಳಿದುಕೊಂಡಿದ್ದಾಗಿ ಸಾಕ್ಷಿ ನುಡಿದಿರುತ್ತಾರೆ. ಈ ಬಗ್ಗೆ ನೀವು ಏನು ಹೇಳುವಿರಿ?

ಉತ್ತರ :

4. ಫ್ರಾಸಾ-1 ರವರು ತಮ್ಮ ಮುಂದುವರಿದ ನುಡಿ ಸಾಕ್ಷ್ಯದಲ್ಲಿ ನಂತರ ಸದರಿ ಮಧ್ಯ ಮಾರಾಟ ಮಾಡಲು ಪರವಾನಗಿ ಇದೆಯೇ ಎಂದು ವಿಚಾರಿಸಲಾಗಿ ಆತನು ಇರುವುದಿಲ್ಲ ಎಂದು ತಿಳಿಸಿದ್ದಾಗಿ, ನಂತರ ಪಂಚರ ಸಮಕ್ಷಮ ಪ್ಲಾಸ್ಟೀಕ್ ಚೀಲದಲ್ಲಿದ್ದ ಮಧ್ಯವನ್ನು ಪರಿಶೀಲಿಸಲಾಗಿ 90 ಎಂ.ಎಲ್.ನ 61 ಓರಿಜಿನಲ್ ಚಾಯ್ಸ್ ವಿಸ್ಕಿಯ ಟೆಟ್ರಾ ಪ್ಯಾಕೇಟ್ ಗಳು ಇರುವುದು ಕಂಡುಬಂದಿದ್ದಾಗಿ, ನಂತರ ಅವುಗಳನ್ನು ಅದೇ ಪ್ಲಾಸ್ಟೀಕ್ ಚೀಲದಲ್ಲಿ ತುಂಬಿ ಅದಕ್ಕೆ ಪಿ ಎಂಬ ಸೀಲಿನೊಂದಿಗೆ ಪಂಚರು ಹಾಗೂ ತನ್ನ ಸಹಿಯುಳ್ಳ ಚೀಟಿಯನ್ನು ಅಂಟಿಸಿದ್ದಾಗಿ, ನಂತರ ಸದರಿ ಸ್ಥಳದಲ್ಲಿ ಫೋಟೋವನ್ನು ತೆಗೆದಿದ್ದಾಗಿ, ಸದರಿ ಮಹಜರನ್ನು ಸಂಜೆಃ 08.30 ರಿಂದ 09.30 ರವರೆಗೆ ತಯಾರಿಸಿದ್ದಾಗಿ, ನಂತರ ಸ್ವತ್ತಿನೊಂದಿಗೆ ಠಾಣೆಗೆ ಬಂದು ವರದಿಯನ್ನು ತಯಾರಿಸಿ ಚಾಸಾ-8 ರವರಿಗೆ ನೀಡಿದ್ದಾಗಿ ಸಾಕ್ಷಿ ನುಡಿದಿರುತ್ತಾರೆ. ಈ ಬಗ್ಗೆ ನೀವು ಏನು ಹೇಳುವಿರಿ?

ಉತ್ತರ :

5. ಫ್ರಾಸಾ-4 – ಜೆ.ಎಸ್. ತಿಪ್ಪೇಸ್ವಾಮಿ - ಡಿ.ವೈ.ಎಸ್.ಪಿ. ಇವರು ತಮ್ಮ ನುಡಿ ಸಾಕ್ಷ್ಯದಲ್ಲಿ ದಿನಾಂಕಃ 23.04.2025 ರಂದು ರಾತ್ರಿಃ10.30 ಗಂಟೆಗೆ ಚಾಸಾ-1 ರವರು ಹಾಜರುಪಡಿಸಿದ ಮಹಜರ್, ಅಮಾನತ್ತುಪಡಿಸಿಕೊಂಡ ಸ್ವತ್ತುಗಳನ್ನು ಹಾಗೂ ವರದಿಯನ್ನು ಸ್ವೀಕರಿಸಿದ್ದಾಗಿ, ನಂತರ ಅಮಾನತ್ತುಪಡಿಸಿಕೊಂಡ ವಸ್ತುಗಳನ್ನು ಠಾಣಾ ಮಾಲುಪಟ್ಟಿಗೆ ಅಳವಡಿಸಿಕೊಂಡಿದ್ದಾಗಿ, ದಿಃ24.04.2025 ರಂದು ಚಾಸಾ-5 ರವರು ನೀಡಿದ ಕಲಂ 63(4) ಪ್ರಮಾಣ ಪತ್ರವನ್ನು, ಸಿಡಿ ಯನ್ನು ಹಾಗೂ ಫೋಟೋಗಳನ್ನು ಸ್ವೀಕರಿಸಿದ್ದಾಗಿ, ದಿಃ11.05.2025 ರಂದು ವಶಪಡಿಸಿಕೊಂಡ ಮದ್ಯವನ್ನು ರಾಸಾಯನಿಕ ವಿಶ್ಲೇಷಣೆಗೆ ಒಳಪಡಿಸಿ ವರದಿಯನ್ನು ನೀಡುವಂತೆ ಪ್ರಾದೇಶಿಕ ವಿಧಿ ವಿಜ್ಞಾನ ಪ್ರಯೋಗಾಲಯ ಚಿಕ್ಕಮಗಳೂರಿಗೆ ಚಾಸಾ-5 ರವರ ಮೂಲಕ ಕಳುಹಿಸಿಕೊಟ್ಟಿದ್ದಾಗಿ, ನಂತರ ದಿಃ14.06.2025 ರಂದು ರಾಸಾಯನಿಕ ವಿಶ್ಲೇಷಣಾ ವರದಿಯನ್ನು ಪಡೆದುಕೊಂಡಿದ್ದಾಗಿ, ನಂತರ ಅದೇ ದಿನ ತನಿಖೆಯನ್ನು ಪೂರ್ಣಗೊಳಿಸಿ ದೋಷಾರೋಪಣೆ ಪಟ್ಟಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಿದ್ದಾಗಿ ಸಾಕ್ಷಿ ನುಡಿದಿರುತ್ತಾರೆ. ಈ ಬಗ್ಗೆ ನೀವು ಏನು ಹೇಳುವಿರಿ?

   ಉತ್ತರ :

6. ಫ್ರಾಸಾ-5 - ರಮೇಶ್ ಎನ್.ಆರ್. ಪಿಸಿ.468 ಇವರು ತಮ್ಮ ನುಡಿ ಸಾಕ್ಷ್ಯದಲ್ಲಿ ದಿನಾಂಕಃ 23.04.2025 ರಂದು ಸಂಜೆಃ 06.45 ಗಂಟೆಗೆ ಚಾಸಾ-1 ರವರಿಗೆ ಮಾಹಿತಿ ಬಂದಿದ್ದು, ಸದರಿಯವರು ಪ್ರಕರಣವನ್ನು ದಾಖಲಿಸಿ ತನಗೆ ಮತ್ತು ಚಾಸಾ-6 ರವರಿಗೆ ಮಾಹಿತಿಯನ್ನು ತಿಳಿಸಿ ಸಂಜೆಃ07.30 ಗಂಟೆಗೆ ಠಾಣೆಯಿಂದ ಹೊರಟು ಮಲ್ಲೇನಹಳ್ಳಿ ಅಂಚೆ, ಮಾವಿನಹಳ್ಳ ಗ್ರಾಮಕ್ಕೆ ಬಂದು ಬಸ್ ನಿಲ್ದಾಣದಲ್ಲಿ ಕಾರನ್ನು ನಿಲ್ಲಿಸಿ ಅಲ್ಲಿ ಇದ್ದಂತಹ ಚಾಸಾ-2 ಮತ್ತು ಚಾಸಾ-3 ರವರಿಗೆ ಚಾಸಾ-1 ರವರು ಮಾಹಿತಿಯನ್ನು ತಿಳಿಸಿ ಅವರನ್ನು ಪಂಚಸಾಕ್ಷಿಗಳನ್ನಾಗಿ ನೇಮಕ ಮಾಡಿಕೊಂಡು ಅಲ್ಲಿಂದ ರಾತ್ರಿಃ 08.25 ಗಂಟೆಗೆ ಮಾಹಿತಿ ಇದ್ದ ಸ್ಥಳಕ್ಕೆ ಹೋಗಿದ್ದು, ಆರೋಪಿಯಾದ ನೀವು ನಿಮ್ಮ ಅಂಗಡಿ ಮುಂಭಾಗ ಸಾರ್ವಜನಿಕ ಸ್ಥಳದಲ್ಲಿ ನೀವು ಅಕ್ರಮವಾಗಿ ಮದ್ಯವನ್ನು ಮಾರಾಟ ಮಾಡುತ್ತಿರುವುದು ಕಂಡುಬಂದಿದ್ದಾಗಿ ಸಾಕ್ಷಿ ನುಡಿದಿರುತ್ತಾರೆ. ಈ ಬಗ್ಗೆ ನೀವು ಏನು ಹೇಳುವಿರಿ?

   ಉತ್ತರ :

7. ಫ್ರಾಸಾ-5 ರವರು ತಮ್ಮ ಮುಂದುವರೆದ ನುಡಿ ಸಾಕ್ಷ್ಯದಲ್ಲಿ ನಂತರ ತಾವು ಆರೋಪಿಯಾದ ನಿಮ್ಮನ್ನು ಸುತ್ತುವರಿದು ಹಿಡಿದು ನಿಮ್ಮ ಹೆಸರು ಮತ್ತು ವಿಳಾಸವನ್ನು ವಿಚಾರಿಸಿ ತಿಳಿದುಕೊಂಡಿದ್ದಾಗಿ, ನಂತರ ಪಂಚರ ಸಮಕ್ಷಮ

ಕೇಸರಿ ಬಣ್ಣದ ಚೀಲವನ್ನು ಪರಿಶೀಲಿಸಲಾಗಿ ಅದರಲ್ಲಿ 90 ಎಂ.ಎಲ್.ನ ಓರಿಜಿನಲ್ ಚಾಯ್ಸ್ ಡೀಲಕ್ಸ್ ವಿಸ್ಕಿಯ 61 ಟೆಟ್ರಾ ಪ್ಯಾಕೇಟ್ ಗಳು ಇರುವುದು ಕಂಡುಬಂದಿದ್ದಾಗಿ, ಅದನ್ನು ಮಾರಾಟ ಮಾಡಲು ಪರವಾನಗಿ ಇದೆಯೇ ಎಂದು ವಿಚಾರಿಸಲಾಗಿ ನೀವು ಪರವಾನಗಿ ಇಲ್ಲ ಎಂದು ತಿಳಿಸಿದ ಮೇರೆಗೆ ಪಂಚರ ಸಮಕ್ಷಮ ಸದರಿ ಚೀಲವನ್ನು ದಾರದಿಂದ ಕಟ್ಟಿ ಪಿ ಎಂಬ ಅಕ್ಷರದಿಂದ ಸೀಲು ಮಾಡಿ ಪಂಚರ ಸಹಿಯುಳ್ಳ ಚೀಟಿಯನ್ನು ಅಂಟಿಸಿದ್ದಾಗಿ, ಸದರಿ ಮಹಜರ್ ಅನ್ನು ರಾತ್ರಿಃ08.30 ರಿಂದ 09.30 ರವರೆಗೆ ತಯಾರಿಸಿದ್ದಾಗಿ ಸಾಕ್ಷಿ ನುಡಿದಿರುತ್ತಾರೆ. ಈ ಬಗ್ಗೆ ನೀವು ಏನು ಹೇಳುವಿರಿ?

ಉತ್ತರ :

8. ಫ್ರಾಸಾ-5 ರವರು ತಮ್ಮ ಮುಂದುವರೆದ ನುಡಿ ಸಾಕ್ಷ್ಯದಲ್ಲಿ ಸದರಿ ಮಹಜರನ್ನು ತಾನೇ ಚಾಸಾ-1 ರವರ ಉಕ್ತಲೇಖನದಂತೆ ಬರೆದಿದ್ದಾಗಿ, ದಿಃ24.04.2025 ರಂದು ಮೊಬೈಲ್ ನಿಂದ ಫೋಟೋ ಮತ್ತು ವೀಡಿಯೋವನ್ನು ಡಿ.ವಿ.ಡಿ ಗೆ ವರ್ಗಾಯಿಸಿ ಅದನ್ನು ಸಿ.ಡಿ ಮಾಡಿ ತನಿಖಾಧಿಕಾರಿಯವರ ಮುಂದೆ ಹಾಜರುಪಡಿಸಿದ್ದಾಗಿ, ಅದರ ಜೊತೆಗೆ ದೃಢೀಕರಣ ಪತ್ರವನ್ನು ಹಾಜರುಪಡಿಸಿದ್ದಾಗಿ ಸಾಕ್ಷಿ ನುಡಿದಿರುತ್ತಾರೆ. ಈ ಬಗ್ಗೆ ನೀವು ಏನು ಹೇಳುವಿರಿ?

ಉತ್ತರ :

9. ನೀವು ಈ ಕೇಸಿನಲ್ಲಿ ಹೆಚ್ಚಿಗೆ ಏನನ್ನಾದರು ಹೇಳುವುದಿದೆಯೇ?

ಉತ್ತರಃ

10. ನೀವು ನಿಮ್ಮ ಪರವಾಗಿ ಯಾವುದಾದರೂ ಸಾಕ್ಷಿ ವಿಚಾರಣೆ ಮಾಡಿಸುತ್ತೀರಾ ಅಥವಾ ಯಾವುದಾದರೂ ದಾಖಲೆ ಹಾಜರುಪಡಿಸುತ್ತೀರಾ?

ಉತ್ತರಃ

ಮೇಲಿನ ಪ್ರಶ್ನೆಗಳನ್ನು ಆರೋಪಿಗೆ ಓದಿ ಕೇಳಿ, ಅವರು ಕೊಟ್ಟ ಉತ್ತರಗಳನ್ನು ನಾನೇ ಸ್ವತಃ ಬರೆದುಕೊಂಡಿರುವುದು ನಿಜವಾಗಿದೆ ಎಂದು ಧೃಡೀಕರಿಸುತ್ತೇನೆ.

Sd/-
[ಕುಮಾರಿ ಸುಜಾತ ]
ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು
ಹಾಗೂ ಮು.ನ್ಯಾದಂ., ಚಿಕ್ಕಮಗಳೂರು.